ದಮಯಂತಿಯದು ಇನ್ನೊಂದು ರೀತಿಯ ಕಥೆಯಾಗಿತ್ತು. ಬರುಬರುತ್ತ ಅವಳು `ಹುಡುಗರು, ಹುಡುಗಿಯರಿಗೆ ಏನು ವ್ಯತ್ಯಾಸ? ಹುಡುಗರನ್ನೇ ಒಂದು ತರಹ ನೋಡ್ತಾರೆ. ಹುಡುಗಿಯರನ್ನೇ ಒಂದು ತರಹ ನೋಡ್ತಾರೆ ಯಾಕೆ ಡ್ಯಾಡ್' ಎಂದು ನನ್ನನ್ನ ಮೊದಲಿಗೆ ಪ್ರಶ್ನಿಸಿದ್ದಳು. ನಾನು ಯಾವುದೇ ರೀತಿಯ ವಿಶ್ಲೇಷಣೆ ನೀಡಿದರೂ ಅವಳಿಗೆ ಸಮಾಧಾನ ಆಗುತ್ತಿರಲಿಲ್ಲ. 'ನೋಡು ದಮಯಂತಿ ನಮ್ಮ ಮನೆಯಲ್ಲಿ ತೇಜಸ್‌ನನ್ನು ಹೇಗೆ ನೋಡ್ತಾ ಇದ್ದೀವೊ ನಿನ್ನನ್ನು ಹಾಗೇ ನೋಡ್ತಾ ಇದ್ದೀವಲ್ಲ?' ಎಂದರೆ 'ನಮ್ಮ ಮನೆಯಲ್ಲಲ್ಲ. ನಾನು ಹೇಳ್ತಾ ಇರುವುದು ಸೊಸೈಟಿಯಲ್ಲಿ' ಎಂದಳು. ಇವಳಿಗೆ ಯಾರಾದರೂ ತಲೆ ಕೆಡಿಸ್ತಾ ಇದ್ದಾರಾ ಎನ್ನುವ ಗುಮಾನಿ ನನಗೆ ಸಣ್ಣಗೆ ಹತ್ತಿದರೂ ಇರಲಾರದು ಎಂದುಕೊಂಡು ಸುಮ್ಮನಾದೆ. ದಮಯಂತಿಯಿಂದ ಇಂತಹ ಮಾತುಗಳನ್ನು ಕೇಳಿದಾಗೆಲ್ಲ, ಸಾವಿತ್ರಿ 'ಸುಮ್ಮನೆ ಇರ್ತೀಯ ಹೇಗೆ?' ಎಂದು ಗದರಿಸುತ್ತಿದ್ದಳು.

ತೇಜಸ್, ಶಾಲೆಯ ಕ್ರಿಕೆಟ್ ತಂಡದ ನಾಯಕನಾಗಿದ್ದರೆ, ದಮಯಂತಿ ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯದರ್ಶಿಯಾಗಿದ್ದಳು. ಊಟ ಮಾಡುವಾಗ, ಟಿವಿ ನೋಡುವಾಗ ಕೆಲವೊಮ್ಮೆ ನಾಲ್ಕೂ ಜನರು ಒಬ್ಬರನ್ನೊಬ್ಬರು ಗೇಲಿ ಮಾಡಿಕೊಂಡು ನಗುತ್ತಿದ್ದೆವು. ತೇಜಸ್ ತನ್ನ ಗೆಳೆಯರು ಮತ್ತು ಅಧ್ಯಾಪಕರ ನಡುವಿನ ವಿನೋದಗಳ ಬಗ್ಗೆ ಹೇಳಿ ಹೇಳಿ ನಮ್ಮನ್ನು ನಗುಸುತ್ತಿದ್ದ. ಅವರ ಶಾಲೆಯಲ್ಲಿ ಹುಡುಗರು ತಾವೇ ಪ್ರತಿಯೊಬ್ಬರಿಗೂ ಇಟ್ಟಿದ್ದ ಅಡ್ಡ ಹೆಸರುಗಳ ಬಗ್ಗೆಯೂ ಹೇಳಿ ನನ್ನನ್ನೆಲ್ಲ ನಗಿಸುತ್ತಿದ್ದ. ದಮಯಂತಿ ಆದಷ್ಟು ರಿಸರ್ವ್ ಆಗಿ ಇರುತ್ತಿದ್ದಳು. ಇಬ್ಬರೂ ಯಾವುದೇ ಪರಿಸ್ಥಿತಿಯಲ್ಲೂ ಕೆಟ್ಟ ಮಾತುಗಳನ್ನು ಆಡುತ್ತಿರಲಿಲ್ಲ. ಹಾಗೇನಾದರೂ ಅವರ ಬಾಯಿಂದ ಬಂದರೆ ಸಾಕು ಸಾವಿತ್ರಿ ಇಬ್ಬರನ್ನೂ ಆಗಲೇ ಗದರಿಸಿ ಹೀಗಲ್ಲ ಹಾಗೆ ಎಂದು ಹೇಳಿಕೊಡುತ್ತಿದ್ದಳು.

***

ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಕೇವಲ ಎರಡು ತಿಂಗಳು ಬಾಕಿ ಇದ್ದು ಶಾಲೆಯಲ್ಲಿ ಮತ್ತು ಟ್ಯೂಶನ್‌ನಲ್ಲಿ ಪಾಠಗಳೆಲ್ಲ ಮುಗಿಯುತ್ತಾ ಬಂದಿದ್ದವು. ನಾವು ಮಕ್ಕಳ ಮೇಲೆ ಸ್ವಲ್ಪ ಒತ್ತಡ ಹೇರುವುದಕ್ಕೆ ಪ್ರಯತ್ನ ಮಾಡುತ್ತಿದ್ದೆವು. ಈಗ ದಮಯಂತಿ ಮತ್ತು ತೇಜಸ್ ಇಬ್ಬರೂ ಬಹಳ ಹೊತ್ತು ಒಂದೇ ಕೋಣೆಯಲ್ಲಿ ಕುಳಿತುಕೊಂಡು ಒಬ್ಬರು ಓದಿದ್ದನ್ನು ಇನ್ನೊಬ್ಬರಿಗೆ ಅವರೇ ಹೇಳಿಕೊಳ್ಳುತ್ತಿದ್ದರು. ವ್ಯಾಸಂಗದಲ್ಲಿ ಇಬ್ಬರೂ ಹೆಚ್ಚು ಕಡಿಮೆ ಒಂದೇ ಹಂತದ ಜ್ಞಾನ, ಗ್ರಹಿಕಾ ಶಕ್ತಿ ಮತ್ತು ಸಾಮರ್ಥ್ಯ ಹೊಂದಿದ್ದರು. ಇಬ್ಬರ ಕೈಬರಹವೂ ಒಂದೇ ರೀತಿಯಾಗಿದ್ದು ಅಕ್ಷರಗಳನ್ನು ಸ್ಪಷ್ಟವಾಗಿ ಬರೆಯುತ್ತಿದ್ದರು. ಇದೆಲ್ಲದರ ಆಧಾರದಿಂದ ಇಬ್ಬರೂ ಶೇಕಡ ತೊಂಬತ್ತು ಅಂಕಗಳನ್ನು ಪಡೆಯುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಆದರೆ ತೊಂಬತ್ತು ಅಂಕಗಳ ಮೇಲೆ ಎಷ್ಟು ಪಡೆಯುತ್ತಾರೆ ಎನ್ನುವುದೇ ಪ್ರಶ್ನೆಯಾಗಿತ್ತು.

ಪ್ರತಿ ವಿಷಯದ ಬಗ್ಗೆ ಸಮಯವನ್ನು ನಿಗದಿಪಡಿಸಲಾಗಿತ್ತು. ಕನ್ನಡ ಮತ್ತು ಹಿಂದಿ ಭಾಷೆಗೆ ಸಮಯದ ಪಟ್ಟಿಯಲ್ಲಿ ಸ್ಥಾನವೇ ಇರಲಿಲ್ಲ. ಯಾಕೆ ಎಂದು ಕೇಳಿದಾಗ ಅವುಗಳನ್ನು ಒಂದೆರಡು ಸಲ ಓದಿಕೊಂಡರೆ ಸಾಕು ತೊಂಬತ್ತು ಅಂಕಗಳಿಗಿಂತ ಹೆಚ್ಚು ಅಂಕಗಳು ಬರುತ್ತವೆ ಎಂಬ ಉತ್ತರ ಬಂದಿತು. ಒಟ್ಟಿನಲ್ಲಿ ಒಳ್ಳೆಯ ಪ್ರಗತಿ ನಡೆಯುತ್ತಿದೆ ಎಂದುಕೊಂಡೆ. ಸಾವಿತ್ರಿ, ಅವರಿಗೆ ಬೇಕಾದ ಸಮಯದಲ್ಲಿ ಬೇಕಾದ ಅಡುಗೆ, ತಿಂಡಿಗಳನ್ನು ಮಾಡಿಕೊಡುತ್ತಿದ್ದಳು. ಮಧ್ಯೆ ಮಧ್ಯೆ ಟಿವಿಯಲ್ಲಿ ಬೇಕಾದ ಸಿನಿಮಾಗಳನ್ನು ನೋಡುತ್ತಿದ್ದರು. ಇನ್ನೂ ವಿಶೇಷವೆಂದರೆ ಕಿವಿಗಳಿಗೆ ಕಿವಿ ಫೋನ್‌ಗಳನ್ನು ಹಾಕಿಕೊಂಡು, ಇಲ್ಲ ರೇಡಿಯೋದಲ್ಲಿ ಹಾಡುಗಳನ್ನು ಕೇಳಿಕೊಂಡು ಇಬ್ಬರೂ ಓದಿಕೊಳ್ಳುತ್ತಿದ್ದರು. ಇದನ್ನು ನೋಡಿ ನಮಗೆ ಆಶ್ಚರ್ಯವಾಗುತ್ತಿತ್ತು. ಕೇಳಿದರೆ ಹಾಗೇ ಮಾಡಿದರೆ ನಮಗೆ ಇನ್ನೂ ಹೆಚ್ಚು ಏಕಾಗ್ರತೆ ಬರುತ್ತದೆ ಎಂಬ ಉತ್ತರ ಬರುತ್ತಿತ್ತು. ಒಟ್ಟಿನಲ್ಲಿ ಯಾವ ಒತ್ತಡವೂ ಇಲ್ಲದೆ ಆಟವಾಡುತ್ತಲೆ ಪರೀಕ್ಷೆಗಳಿಗೆ ತಯಾರಾಗುತ್ತಿದ್ದರು.

ಅಂತೂ ಬದುಕಿನ ಅತಿ ಭಯಂಕರವಾದ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ಮುಗಿದುಹೋಗಿ ಮಕ್ಕಳಿಗಿಂತ ನಮಗೆ ಭಾರೀ ಪರಿಹಾರ ದೊರಕಿದಂತಾಗಿತ್ತು. ಮಕ್ಕಳು ಯಾವ ಉದ್ವೇಗವೂ ಇಲ್ಲದೆ ಪರೀಕ್ಷೆಗಳನ್ನು ಮುಗಿಸಿದ ಮೇಲೆ ಮನೆಯಲ್ಲಿ ಒಂದೇ ಗಲಾಟೆ ಮಾಡಲು ಪ್ರಾರಂಭಿಸಿದ್ದರು. ತೇಜಸ್ ಮನೆಯ ಒಳಗೆಯೇ ಕ್ರಿಕೆಟ್ ಆಡಿದರೆ, ದಮಯಂತಿ ಮನೆಯೇ ಎದ್ದು ಹೋಗುವಂತೆ ಸಿನಿಮಾ ಹಾಡುಗಳನ್ನು ಹಾಕಿಕೊಂಡು ಕುಣಿಯುತ್ತಿದ್ದಳು. ಈ ನಡುವೆ ನಮ್ಮ ಹಳ್ಳಿಯಲ್ಲಿ ಕೆಲವು ದಿನಗಳನ್ನು ಕಳೆದು ಬಂದೆವು. ನಮ್ಮ ತಂದೆ ತಾಯಿ, ಮಕ್ಕಳನ್ನು ಕರೆದುಕೊಂಡು ತೋಟದಲ್ಲಿನ ವ್ಯವಸಾಯದ

## ಇಲ್ಲಿಯವರೆಗೆ



ದ್ವೀಪದ ನಡುವೆ ಇದ್ದ ಸಮುದ್ರದಲ್ಲಿ ದೋಣಿ ವಿಹಾರ ಮಾಡುತ್ತಿದ್ದಂತೆ ಇದ್ದಕ್ಕಿದ್ದಂತೆ ಬಿರುಗಾಳಿ ಬೀಸಿ ಕೃಷ್ಣ–ಸಾವಿತ್ರಿ ಇದ್ದ ದೋಣಿಯೂ ಮಗುಚುತ್ತದೆ. ಮಳೆಯೂ ಜೋರಾಗಿ ಬರುತ್ತದೆ. ಆಗ ನಾವಿಕರು ಸಮಯಪ್ರಜ್ಞೆಯಿಂದ ಇಬ್ಬರನ್ನೂ ಮೀನು ಹಿಡಿಯುವ ದೋಣಿಯಲ್ಲಿ ತಂದು ದಡ ಮುಟ್ಟಿಸುತ್ತಾರೆ. ಇಬ್ಬರಿಗೂ ಶಾಕ್ ಆಗುತ್ತದೆ. ಪಕ್ಕದಲ್ಲಿದ್ದ ಆಸ್ಪತ್ರೆಗೆ ಹೋಗಿ ಪ್ರಥಮ ಚಿಕಿತ್ಸೆ ಪಡೆಯುತ್ತಾರೆ. ಈ ಘಟನೆ ನಡೆದ ಮೇಲೆ ಇಬ್ಬರೂ ಬೆಂಗಳೂರಿಗೆ ಬಂದು ಸೇರಿಕೊಳ್ಳುತ್ತಾರೆ. ಸಾವಿತ್ರಿಯ ಮುಖದಲ್ಲಿನ ವೇದನೆಯನ್ನು ಕಂಡ ಕೃಷ್ಣನ ಅತ್ತೆ,ಮಾವ ಏನೋ ದುರಂತ ಸಂಭವಿಸಿದೆ ಎಂಬುದನ್ನು ಊಹೆ ಮಾಡುತ್ತಾರೆ. ಈ ಮಧ್ಯೆ ಸಾವಿತ್ರಿಯ ಅಣ್ಣ ರಾಮಚಂದ್ರ ಮೆಡಿಕಲ್ ಓದಿ ಬೆಂಗಳೂರಿನಲ್ಲೇ ಎಂಡಿಯನ್ನೂ ಮುಗಿಸಿ ಕೆಲಸಕ್ಕೆ ಸೇರುತ್ತಾನೆ. ಆತನಿಗೆ ಹೆಣ್ಣು ಹುಡುಕಬೇಕು ಎಂಬ ಮಾತು ಬರುತ್ತದೆ. ಆಗ ಸಾವಿತ್ರಿ ಅಣ್ಣನೇ ಒಬ್ಬ ಹುಡುಗಿಯನ್ನು ನೋಡಿಕೊಂಡಿದ್ದಾನೆ ಎನ್ನುತ್ತಾಳೆ. ಹುಡುಗಿ ಜ್ಯೋತಿ. ಆಕೆಯ ತಂದೆ ತಾಯಿಯರೂ ಡಾಕ್ಟರೇ ಆಗಿರುತ್ತಾರೆ.

ಇಬ್ಬರ ಮದುವೆಯಾಗಿ 10 ವರ್ಷ ಕಳೆಯುತ್ತದೆ. ಬೇರೆ ಮನೆ ಕಟ್ಟಿಕೊಂಡು ಹೋಗುತ್ತಾರೆ. ತೇಜಸ್–ದಮಯಂತಿ ಎಂಬ ಅವಳಿ ಮಕ್ಕಳು ಈ ದಂಪತಿಗೆ ಹುಟ್ಟುತ್ತವೆ.